# ಲಿಪಿಯ ಹುಡುಕಾಟದಲ್ಲಿ

**ಶ್ರೀಮತಿ ಹುದಾಹುಸನಾ ಇಸಾಮದಿ**

ಅತಿಥಿ ಉಪನ್ಯಾಸಕರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕಾನೂನು ಶಾಲೆ, ನವನಗರ, ಹುಬ್ಬಳ್ಳಿ.

DOI: https://doi.org/10.5281/zenodo.17773690

## ABSTRACT:

ಭಾಷೆಯೆಂಬುದು ಸಾಮಾಜಿಕ ಸಂಪನ್ಮೂಲ. ಒಂದು ನಾಗರಿಕತೆಯ ಸಂಸ್ಕೃತಿಯ, ಜೀವಾಳ. ಆದರೆ ಇದು ಅಮೂರ್ತ ಸ್ವರೂಪದ್ದು. ಇದರ ಅಮೂರ್ತ ಸ್ವರೂಪಕ್ಕೆ ರೂಪ ರೂಪಿಸುವ ಸಾಧನವೇ 'ಲಿಪಿ'. ಲಿಪಿಯ ಉಗಮ, ವಿಕಾಸವು ಭಾಷೆಯಷ್ಟೇ ಹಳೆಯದು. ಇದು ಆದಿಮಾನವನ ಕಾಲದ ಚಿತ್ರಲಿಪಿ ಹಾಗೂ ಗುಹಾಲಿಪಿಯಿಂದ ಹಿಡಿದು ಇಂದಿನ ಆಧುನಿಕ ಲಿಪಿಯವರೆಗೆ, ನಡೆದು ಬಂದ ಹಾದಿ ಅತಿ ಸುದೀರ್ಘವಾದುದು. ಹಲವು ಎಡರು ತೊಡರುಗಳ ನಂತರವೂ ಸಾಹಿತ್ಯದ ಬೆಳಗುವಿಕೆಗೆ ಬೆಳಕಾಗಿದೆ. ಇದರ (ಲಿಪಿಯ) ಹುಡುಕಾಟವು ನಮ್ಮನ್ನು ಪೂರ್ವ ಇತಿಹಾಸದಿಂದ ಸಿಂಧೂ ಲಿಪಿ, ಖರೋಷ್ಠಿ ಲಿಪಿ, ಬ್ರಾಹ್ಮಿ ಲಿಪಿ, ದೇವನಾಗರಿ, ಕ್ಯೂನಿಫಾರಂ, ಹೈರೋಗ್ಲಿಫಿಕ್, ಕ್ರೀಟ್ ಲಿಪಿ, ಹಿಟ್ಟೈಟ್ ಲಿಪಿ ಇನ್ನೂ ಮುಂತಾದವುಗಳ ಪರಿಚಯ ನಮ್ಮ ಭಾರತೀಯ ಇತಿಹಾಸದಲ್ಲಿ ಕಾಣಸಿಗುತ್ತದೆ. ಸಾಹಿತ್ಯವನ್ನು ಭಾಷೆಯು ಯಾವ ರೀತಿ ಪೋಷಕವಾಗಿ ಮಹತ್ವ ಪಡೆದಿದೆಯೋ, ಅದೇ ರೀತಿ ಭಾಷೆಗೆ ಪೋಷಕವಾಗಿ ಲಿಪಿಯು ಕೂಡ ಮಹತ್ವ ಪಡೆದಿದೆ ಎಂಬುದನ್ನು ನಾವು ಈ ಲೇಖನದಲ್ಲಿ ಕಾಣುತ್ತೇವೆ.

## KEYWORDS:

ಲಿಪಿ, ಲಿಪಿಗಳ ಪ್ರಕಾರಗಳು, ಲಿಪಿಯ ಮಹತ್ವ, ಬ್ರಾಹ್ಮಿ ಲಿಪಿ, ಸಿಂಧೂ ಲಿಪಿ, ಖರೋಷ್ಠಿ ಲಿಪಿ.

**'ಯಾವ ಮುಖದಿಂದೆಳು ನಿಂದಳೊ**
**ಭಾಷೆಯೆಲ್ಲಕು ದೇವಿ ಸರಸತಿ**
**ಅಂತ ದೇವಗೆ ಎಲ್ಲ ಬಲ್ಲಗೆ ತಮವ ದೂಡವ ಹೊಳೆವ ಬೆಳಕಿಗೆ**
**ನಾನು ವಂದಿಪೆನು'**

**(ಮಹಾಮಾರ್ಗ ಅಭಿನಂದನ ಗ್ರಂಥ)**

ಮಾನವನ ನಾಗರಿಕತೆಯ ವಿಕಾಸವು ಅತ್ಯಂತ ಕೌತುಕಕಾರಿಯು ಹಾಗೂ ರೋಮಾಂಚನಕಾರಿಯಾದದ್ದು, ಆದಿಮಾನವನಿಂದ – ನವಯುಗದ ಮಾನವನವರೆಗಿನ ಪಯಣದಲ್ಲಿ ಹತ್ತು ಹಲವು ಸಂಘರ್ಷಗಳು ಹಾಗೂ ಆತನ

ಮಾನಸಿಕ, ಬೌದ್ಧಿಕ ಬೆಳವಣಿಗೆಯ ಮುಖಗಳ ಪರಿಚಯವನ್ನು ಕಾಣಬಹುದು.

ಎಲ್ಲಕ್ಕಿಂತ ಮುಖ್ಯವಾಗಿ ಮಾನವ ಬುದ್ಧಿಜೀವಿ. ಈತನ ಈ ವೈಶಿಷ್ಟ್ಯತೆಯು ಎಲ್ಲ ಪ್ರಾಣಿಗಳಿಗಿಂತ ಈತನನ್ನು ಪ್ರತ್ಯೇಕವಾಗಿ ಗುರುತಿಸಲ್ಪಡುವ ಸಾಧನಗಳಲ್ಲೊಂದಾಗಿದೆ. ಈತನ ಮಾತನಾಡುವ ಕೌಶಲ, ವ್ಯವಹಾರ ಜ್ಞಾನ, ಕೌತುಕ, ಅಭಿವೃದ್ಧಿ ಹೊಂದುವ ತವಕ ಇವೆಲ್ಲವುಗಳೂ ಈತನನ್ನು ಒಂದಿಲ್ಲೊಂದು ರೀತಿಯಲ್ಲಿ ವಿಶಿಷ್ಟವಾದ ಜೀವಿಯನ್ನಾಗಿಸಿವೆ.

ಮಾನವ ಈವರೆಗೂ ಕೇವಲ ಹೊರಗಿನ ಕತ್ತಲೆಯನ್ನು ಕಳೆಯುವುದರ ಕಡೆ ಮಾತ್ರ ತನ್ನ ಗಮನ ಕೊಡಲಿಲ್ಲ, ಆತ ತನ್ನ ಅಂತರಂಗದ ಕತ್ತಲೆಯನ್ನು ಕಳೆಯಲು ಸಾಹಿತ್ಯವೆಂಬ ದೀವಿಗೆಯನ್ನು ಬಳಸಿಕೊಂಡಿದ್ದಾನೆ. ಅದು ಮೌಖಿಕ ಸಾಹಿತ್ಯವಾಗಿರಬಹುದು ಅಥವಾ ಶಿಷ್ಟ ಸಾಹಿತ್ಯವಾಗಿರಬಹುದು, ಇವೆರಡರ ರೂಪವನ್ನು ತನ್ನ ಬೌದ್ಧಿಕ ವಿಕಾಸದ ಅಂತರಂಗವನ್ನು ಬೆಳಗಿಸಲು ಬಳಸಿಕೊಂಡಿದ್ದಾನೆ. ಒಂದು ಸಾಹಿತ್ಯ ಬೆಳೆಯಬೇಕಾದರೆ ಕೇವಲ ಭಾಷೆ ಮಾತ್ರ ಪ್ರಮುಖ ಪಾತ್ರವಹಿಸುವುದಿಲ್ಲ, ಅದರ ಜೊತೆ-ಜೊತೆಗೆ ಅದರ ಆಯಾ ಭಾಷೆಗೆ ಬಳಸಲ್ಪಡುವ ಲಿಪಿಯು ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಲಿಪಿಯ ಹೊರತಾಗಿ ಭಾಷೆಯು ಅಮೂರ್ತ ಸ್ವರೂಪದ್ದು. ಭಾಷಾ ಸಾಹಿತ್ಯಕ್ಕೆ ಒಂದು ಸ್ಪಷ್ಟವಾದ ಮೂರ್ತ ಸ್ವರೂಪವನ್ನು ಲಿಪಿಯು ತಂದುಕೊಡುತ್ತದೆ.

ಈ ರೀತಿಯ ಸಾಹಿತ್ಯದ ಭವ್ಯ ಪರಂಪರೆ ಬೆಳೆದು ಬರಬೇಕಾದರೆ ಇದಕ್ಕೆ ಲಿಪಿ ಹಾಗೂ ಭಾಷೆ ಎರಡೂ ಸಹ ಪೂರಕ ಶಕ್ತಿಗಳಾಗಿ ತಮ್ಮ ಕಾರ್ಯವನ್ನು ನಿರ್ವಹಿಸುತ್ತಲೇ ಬಂದಿವೆ.

**ಅರ್ಥ:**

'ಲಿಪಿ' ಎಂದರೆ 'ಬರಹ' ಎಂದರ್ಥ. ಸಂಸ್ಕೃತದಲ್ಲಿ ಹಾಗೂ ಪಾಲಿ ಭಾಷೆಯಲ್ಲಿ 'ಬರವಣಿಗೆ', 'ವರ್ಣಮಾಲೆ' ಎಂಬ ಅರ್ಥವಿದೆ. ಮೊದಲ ಬಾರಿಗೆ ಲಿಪಿ ಮತ್ತು ಲಿಪಿಕಾರ ಎಂಬ ಪದಗಳು ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಕಂಡುಬರುತ್ತವೆ. ಸಂಸ್ಕೃತ ಮೂಲ 'ತುಡಿ'ಯಿಂದ ಬಂದುದಾಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯ.

ಪ್ರಪಂಚದಲ್ಲಿ ಲಿಪಿಗಳು ಸೀಮಿತ ಸಂಖ್ಯೆಯಲ್ಲಿದ್ದರೆ, ಭಾಷೆಗಳು ಅಪಾರ ಸಂಖ್ಯೆಯಲ್ಲಿವೆ. ಮೌಖಿಕ ಪರಂಪರೆಗೆ ಭಾಷೆಯು ಊರುಗೋಲಾದರೆ, ಲಿಖಿತ ಸಾಹಿತ್ಯದ ಪರಂಪರೆಗೆ ಭಾಷೆ ಹಾಗೂ ಲಿಪಿಗಳೆರಡೂ ಆಧಾರವಾಗಿರುವುದನ್ನು ನಾವು ಓಲೆಗರಿಗಳು, ತಾಮ್ರಪಟಗಳು, ತಾಳೆಗರಿಗಳು ಹಾಗೂ ಶಿಲಾಶಾಸನಗಳು ಇಂದಿನ ಆಧುನಿಕ ಯುಗದಲ್ಲಿ ಕಾಣುತ್ತೇವೆ.

ಲಿಪಿಯು ಮುಖ್ಯವಾಗಿ ಹಲವು ಹಂತಗಳನ್ನು ದಾಟಿ ಬಂದಿರಬಹುದೆಂದು

ಊಹಿಸಬಹುದು. ಮೊದಲನೆಯದು ಗುಹಾಲಿಪಿ (Cave Character), ಚಿತ್ರಲಿಪಿ (Pictograph), ಭಾವಲಿಪಿ (Ideograph), ನಂತರದಲ್ಲಿ ಪದಲಿಪಿ.

ಗುಹಾಲಿಪಿಯಲ್ಲಿ ಮಾನವನು ತನ್ನ ಜ್ಞಾಪಕಾರ್ಥವಾಗಿ ಅಥವಾ ಸಂಜ್ಞೆಗಳನ್ನು ಸೂಚಿಸಲಿಕ್ಕಾಗಿ ಅಥವಾ ದಿನಗಳ ಲೆಕ್ಕಾಚಾರಕ್ಕೆ ಸಹಾಯಕವಾಗಿ ಸಂಜ್ಞೆ ಅಥವಾ ಚಿಹ್ನೆಗಳ ಮೂಲಕ ಲಿಪಿಯನ್ನು ಬಳಸುತ್ತಿದ್ದ. ಕಾಲಾಂತರದಲ್ಲಿ ಇದು ಆತನ ಹವ್ಯಾಸ ಅಥವಾ ಅನಿವಾರ್ಯತೆ ಹಾಗೂ ಮನರಂಜನೆಯ ರೂಪದಲ್ಲಿ ಚಿತ್ರಲಿಪಿಯಾಗಿ ಮೂಡಿಬಂದಿತು. ಆದರೆ ಎಲ್ಲ ಚಿತ್ರಲಿಪಿಗಳು ಭಾವವನ್ನು ಸೂಚಿಸುವುದಕ್ಕೆ ಸಹಕಾರಿಯಾಗಿರಲಿಲ್ಲ.

ಉದಾ: ಸೂರ್ಯನನ್ನು ಚಿತ್ರಲಿಪಿಯಿಂದ ಗುರುತಿಸಬಹುದು, ಆದರೆ ಬಿಸಿಲಿನ ತಾಪವನ್ನು ಚಿತ್ರಿಸುವುದಕ್ಕೆ ಆಗುವುದಿಲ್ಲ. ನೀರನ್ನು ಚಿತ್ರದ ಮೂಲಕ ಬಿಂಬಿಸಬಹುದು, ಆದರೆ ಬಾಯಾರಿಕೆಯನ್ನಲ್ಲ.

ಹೀಗೆ ಚಿತ್ರಲಿಪಿಯು ಹಂತಹಂತವಾಗಿ ವಿಕಾಸ ಹೊಂದುತ್ತಾ, ಭಾವಲಿಪಿಯನ್ನು ಬಯಸಿತು. ಈ ನಿಟ್ಟಿನಲ್ಲಿ ಮಾನವನು ಸಹ ಇನ್ನೂ ಕಾರ್ಯತತ್ಪರನಾಗಿ ಲಿಪಿಯ ವಿಕಾಸದಲ್ಲಿ ತೊಡಗಿದನು. ಇದು ಮಾನವನನ್ನು ಭಾವಲಿಪಿಯೆಡೆಗೆ ಸೆಳೆಯಿತು. ನಂತರದ ದಿನಗಳಲ್ಲಿ ಇದು ಪದಲಿಪಿಯ ರೂಪವನ್ನು ಪಡೆಯಿತೆನ್ನಬಹುದು.

**ಲಿಪಿಗಳ ಪ್ರಕಾರಗಳು:**

ಲಿಪಿಯ ಹುಡುಕಾಟದಲ್ಲಿ ಮಾನವನು ಪ್ರಪಂಚದಾದ್ಯಂತ ಹೇಗೆ ಹರಡಿದನೋ ಅದೇ ರೀತಿಯಲ್ಲಿ ಆತನ ಹುಡುಕಾಟವು ವಿವಿಧ ಪ್ರಭೇದಗಳಾಗಿ ಜಗತ್ತಿನ ಮೂಲೆಮೂಲೆಗೂ ಹರಡಿದವು. ಇದು ಸಿಂಧೂ ಲಿಪಿ, ದೇವನಾಗರಿ, ಕ್ಯೂನಿಫಾರಂ, ಹೈರೋಗ್ಲಿಫಿಕ್, ಕ್ರೀಟ್ ಲಿಪಿ, ಹಿಟ್ಟೈಟ್ ಲಿಪಿ, ಖರೋಷ್ಠಿ ಲಿಪಿ, ಅರಾಮೇಯಿಕ್ ಲಿಪಿ, ಬ್ರಾಹ್ಮಿ ಲಿಪಿ ಮುಂತಾದ ರೂಪಗಳನ್ನು ಪಡೆದವು. ಈಜಿಪ್ಟಿನವರು ಹೈರೋಗ್ಲಿಫಿಕ್ ಎಂದರೆ ಕೆತ್ತಿದ ಪವಿತ್ರಾಕ್ಷರ ಎಂದು ಕರೆದರು. ಇದು ಪದಸೂಚಕ ಚಿಹ್ನೆ ಹಾಗೂ ಏಕಶಬ್ದ ಸೂಚಕ ಚಿಹ್ನೆಯನ್ನು ಸಹ ಹೊಂದಿದೆ. ಈ ಲಿಪಿಯಲ್ಲಿ ಸ್ವರಗಳ ಬಳಕೆ ಇರದೆ ವ್ಯಂಜನಗಳು ಮಾತ್ರ ಬಳಕೆಯಲ್ಲಿದ್ದವು. ಇದು ಸುಮಾರು ಎರಡು ಶತಮಾನಗಳ ಕಾಲದವರೆಗೂ ಬಳಕೆಯಲ್ಲಿತ್ತು.

ಮುಂದಿನ ಹಂತದಲ್ಲಿ ನಾವು ಕಾಣಬಹುದಾದ ಪದಲಿಪಿಯ ಬಳಕೆಯು ಇಂತಿಷ್ಟೇ ಕಾಲಮಾನದಲ್ಲಿ ಆಯಿತೆಂದು ನಾವು ಖಚಿತವಾಗಿ ಹೇಳಲು ಸಾಧ್ಯವಿಲ್ಲವಾದರೂ ಭಾಷಾ ವಿದ್ವಾಂಸರಾದ ಸರ್ ಆರ್ಥರ ಇವಾನ್ಸರ ಹೇಳಿಕೆಯ ಪ್ರಕಾರ, 'ಕ್ರೀಟ್‌ನ ಲೀನಿಯರ್ ಲಿಪಿಯಿಂದಲೇ ವರ್ಣಮಾಲೆ ಪ್ರಾರಂಭವಾಯಿತೆಂದು' ಹೇಳಿದ್ದಾರೆ. ಅದಲ್ಲದೇ ಪ್ಯಾಲೆಸ್ಟೀನ್ ನಗರವನ್ನು 'ಅಕ್ಷರಗಳ ನಗರ' ಎಂದು ಸಹ

ಕರೆಯುತ್ತಾರೆ.

ಹೀಗೆ ಮಾನವ ವಿಕಾಸದೊಡನೆ ಮಾನವನೊಡಗೂಡಿಯೇ ಇದ್ದು ಹತ್ತು ಹಲವು ಪ್ರದೇಶಗಳಿಗೆ ಪ್ರವೇಶಿಸಿ, ಉತ್ತರ ಸಿಮೇಟಿಕ್, ದಕ್ಷಿಣ ಸಿಮೇಟಿಕ್ ಹಾಗೂ ಕ್ಯಾನಟೈಟ್ ಎಂಬ ಉತ್ತರ ಸೆಮೆಟಿಕ್ ಪ್ರಭೇದ, ಅರೇಬಿಯ ಸಿನಾಯ ಎಂಬ ದಕ್ಷಿಣ ಸೆಮೆಟಿಕ್ ಪ್ರಭೇದ ಹಾಗೂ ಇನ್ನೂ ಮುಂತಾದ ಮೊಬೈಟ ಎಡೋಮೈಟ್, ಅಮೋನೈಟ್, ಫಿನೀಯನ್ ಮುಂತಾದ ಲಿಪಿಗಳು ವಿಕಾಸ ಹೊಂದಿದವು.

ಭರತಖಂಡದಲ್ಲಿ ನಾವು ಲಿಪಿಗಳ ಪರಿಚಯವನ್ನು ಗುಹಾಲಿಪಿಗಳು ಹಾಗೂ ಅಶೋಕನ ಶಾಸನಗಳಿಂದ ಕಂಡುಕೊಂಡೆವೆಂದರೆ ತಪ್ಪಾಗಲಿಕ್ಕಿಲ್ಲ, ಏಕೆಂದರೆ, ಅಶೋಕನ ಶಾಸನಗಳು ಕ್ರಿ.ಪೂ ಕಾಲಕ್ಕೆ ಸೇರಿದ್ದವುಗಳಾಗಿದ್ದು, ಆಯಾ ಪ್ರಾದೇಶಿಕ ಭಾಷೆಗಳಿಗನುಗುಣವಾಗಿ ಖರೋಷ್ಠಿ, ಬ್ರಾಹ್ಮಿ ಲಿಪಿಗಳನ್ನು ನಾವು ಕಾಣುತ್ತೇವೆ. ಆದರೆ ಭಾಷೆ ಆಯಾ ಭೌಗೋಳಿಕ ಪ್ರದೇಶಗಳಿಗನುಗುಣವಾಗಿ ಪ್ರಾಕೃತ, ಪಾಲಿ, ಅರಾಮೇಯಿಕ್ ಭಾಷೆಗಳನ್ನು ಕಾಣಬಹುದು, ಆದರೆ ಅತಿ ಹೆಚ್ಚಾಗಿ ಬಳಸಲ್ಪಟ್ಟಿರತಕ್ಕಂತಹ ಲಿಪಿ, ಬ್ರಾಹ್ಮಿ ಲಿಪಿಯಾಗಿದೆ.

**ಲಿಪಿಗಳನ್ನು ಬರೆಯುವ ಬಗೆಗಳು:**

1. ಸಿಂಧೂ ಲಿಪಿ
2. ಬ್ರಾಹ್ಮಿ ಲಿಪಿ
3. ಖರೋಷ್ಠಿ ಲಿಪಿ

**ಸಿಂಧೂ ಲಿಪಿ:**

ಸಿಂಧೂ ಲಿಪಿಯನ್ನು 'ಸಂಕೇತಗಳ ಲಿಪಿ' ಅಥವಾ 'ಹರಪ್ಪನ್ ಲಿಪಿ' ಎಂದೂ ಕರೆಯಲಾಗುತ್ತದೆ. ಇದು ಮುಖ್ಯವಾಗಿ ಚಿಹ್ನೆಗಳ ಸಂಕೇತಗಳನ್ನು ಹೊಂದಿದೆ. ಕೆಲವು ಅಮೂರ್ತ ಚಿಹ್ನೆಗಳನ್ನು ಸಹ ಇದು ಹೊಂದಿದೆ. 1992 ರವರೆಗಿನ ದಾಖಲೆಗಳ ಪ್ರಕಾರ ಪ್ರಮುಖ ಚಿಹ್ನೆಗಳು ಸುಮಾರು 400 ಕ್ಕಿಂತಲೂ ಹೆಚ್ಚಾಗಿವೆ. ಇದನ್ನು ಸಾಮಾನ್ಯವಾಗಿ ಬಲದಿಂದ ಎಡಕ್ಕೆ ಓದುವ ಮತವನ್ನು ಹೊಂದಿದ್ದರೆ, ಇನ್ನೂ ಕೆಲವರು ಎಡದಿಂದ ಬಲಕ್ಕೆ ಓದುವ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಇದು ಭಾರತದಲ್ಲಿ ಅತಿ ಪ್ರಾಚೀನ, ಸಂಕೀರ್ಣ ಹಾಗೂ ಕ್ಲಿಷ್ಟಕರ ಮಾದರಿಯನ್ನು ಹೊಂದಿದ್ದಾಗಿದೆ.

**ಬ್ರಾಹ್ಮಿ ಲಿಪಿ:**

ಭಾರತದಲ್ಲಿ ಅಶೋಕನ ಹಲವಾರು ಶಾಸನಗಳು ಬ್ರಾಹ್ಮಿ ಲಿಪಿಯಲ್ಲಿವೆ. ಇದು ಎಡದಿಂದ ಬಲಕ್ಕೆ ಓದಲ್ಪಡುವ ಲಿಪಿಯಾಗಿದೆ. ಜೈನ ದಂತಕಥೆಗಳ ಪ್ರಕಾರ

'ಬರವಣಿಗೆಯ' ಲಿಪಿಗಳನ್ನು ಅವರ ಮೊದಲ ತೀರ್ಥಂಕರರಾದ ಋಷಭನಾಥನು ತನ್ನ ಮಗಳಿಗೆ 'ಬ್ರಾಹ್ಮೀ' ಎಂಬ ಲಿಪಿಯನ್ನು ಕಲಿಸಿದನು. ಈ ಪ್ರಕಾರ ಆಕೆ ಕಲಿತ ಲಿಪಿ ಬ್ರಾಹ್ಮೀ > ಬ್ರಾಹ್ಮಿಯಾದಳು. ಅವಳು ಕಲಿತ ಲಿಪಿಯೇ ಬ್ರಾಹ್ಮಿ ಲಿಪಿಯಾಯಿತೆಂದು ದಂತಕಥೆಯಿದೆ. ಆದರೆ ಇದಕ್ಕೆ ಯಾವುದೇ ಆಧಾರಗಳಿಲ್ಲ.

ಬ್ರಾಹ್ಮಿ ಲಿಪಿಯು ಮುಖ್ಯವಾಗಿ ಅಶೋಕನ ಶಾಸನಗಳಲ್ಲಿ ಹಾಗೂ ಸಮುದ್ರಗುಪ್ತನ ಶಾಸನಗಳಲ್ಲಿ ಕಂಡುಬಂದಿವೆಯಾದರೂ ಇದನ್ನು ಮೊಟ್ಟ ಮೊದಲ ಬಾರಿಗೆ ಅರ್ಥೈಸಿಸ ಓದಿದ ಶ್ರೇಯಸ್ಸು ಪುರಾತತ್ವ ಶಾಸ್ತ್ರಜ್ಞನಾದ ಜೇಮ್ಸ್ ಪ್ರಿನ್ಸೆಪ್ ಮಹಾಶಯನಿಗೆ ಸಲ್ಲುತ್ತದೆ. ಬ್ರಾಹ್ಮಿ ಲಿಪಿಯ ಪ್ರತಿ ಅಕ್ಷರವೂ ವ್ಯಂಜನವನ್ನು ಪ್ರತಿನಿಧಿಸುತ್ತದೆ. ಇದು ವಿಶೇಷವಾಗಿ ಸಂಯೋಜಿತ ವ್ಯಂಜನಗಳನ್ನು ಹೊಂದಿದೆ, ಇದೂ ಸ್ವರ ಲಿಪಿಯನ್ನು ಹೊಂದಿದ್ದರೂ ಇದರ ವಿಶೇಷತೆ 'ಒತ್ತಕ್ಷರ' ಹಾಗೂ 'ವ್ಯಂಜನ' ವಾಗಿದೆ.

**ಬ್ರಾಹ್ಮಿ ಲಿಪಿಯ ಎರಡು ಪ್ರಕಾರಗಳನ್ನು ನಾವು ಭಾರತದಲ್ಲಿ ಈ ಪ್ರಕಾರವಾಗಿ ಕಾಣಬಹುದು:**

1. **ಉತ್ತರ ಬ್ರಾಹ್ಮಿ ಲಿಪಿಗಳು**
2. **ದಕ್ಷಿಣ ಬ್ರಾಹ್ಮಿ ಲಿಪಿಗಳು**

ದೇವನಾಗರಿ, ಸಿಲ್ಹೇಟಿ, ಗುಜರಾತಿ, ಬಂಗಾಲಿ, ಅಸ್ಸಾಮಿ, ಶಾರದ, ತಿರ್ಹುತಾ, ಓಡಿಯಾ, ಗುರುಮುಖಿ, ಖುದಾಬಾದಿ, ಮೈಥೆಯಿ, ಟಿಬೇಟಿಯನ್, ಟಕ್ರಿ, ಲೆಪ್ಚಾ ಇತ್ಯಾದಿ ಉತ್ತರ ಬ್ರಾಹ್ಮಿ ಲಿಪಿಗಳಾಗಿವೆ. ತಮಿಳು, ಮಲಯಾಳಂ, ಸಿಂಹಳ, ತೆಲುಗು, ಕನ್ನಡ, ಸೌರಾಷ್ಟ್ರ, ಬರ್ಮಿಸ್, ಥಾಯ್, ಲಾವೋ, ಸುಂದನೀಸ್ ಇತ್ಯಾದಿ ದಕ್ಷಿಣ ಬ್ರಾಹ್ಮಿ ಲಿಪಿಗಳಾಗಿವೆ.

**ಖರೋಷ್ಠಿ ಲಿಪಿ:**

ಭಾರತದಲ್ಲಿ ಅಶೋಕನ ಶಾಸನಗಳು ಕೆಲವೊಂದು ಖರೋಷ್ಠಿ ಲಿಪಿಯಲ್ಲೂ ಲಭ್ಯವಾಗಿವೆ. ಇವು ಮುಖ್ಯವಾಗಿ ಔತ್ತರೇಯ ಭಾಗದಲ್ಲಿ ಲಭ್ಯವಾಗಿವೆ. ಈ ಲಿಪಿಯನ್ನು ಬಲದಿಂದ ಎಡಕ್ಕೆ ಓದಲಾಗುತ್ತದೆ. 'ಖರೋಷ್ಠಿ' ಪದದ ಅರ್ಥ, ಕತ್ತೆಯ ಚರ್ಮ ಅಥವಾ ಕತ್ತೆಯ ಕೆಳತುಟಿ ಎಂದರ್ಥ. ಇದನ್ನು ಗಾಂಧಾರಿ ಲಿಪಿಯೆಂತಲೂ ಕರೆಯಲಾಗುತ್ತದೆ. ಖರೋಷ್ಠಿ ಲಿಪಿಯ ಉಚ್ಚಾರಾಂಶವು ಸಣ್ಣ ಧ್ವನಿಯನ್ನು ಪೂರ್ವನಿಯೋಜಿತವಾಗಿ ಹೊಂದಿರುತ್ತದೆ. ಖರೋಷ್ಠಿ ಲಿಪಿಯು ಕೇವಲ ಒಂದು ಸ್ವತಂತ್ರ ಸ್ವರವನ್ನು ಒಳಗೊಂಡಿದ್ದು, ಇದನ್ನು ಪ್ರಾರಂಭಿಕ ಸ್ವರಗಳಿಗೆ ಬಳಸಲಾಗುತ್ತದೆ, ಹಾಗೂ ಈ ಲಿಪಿಯನ್ನು ದೀರ್ಘ ಹಾಗೂ ಹ್ರಸ್ವ ಸ್ವರಗಳಲ್ಲಿ ಯಾವುದೇ ವ್ಯತ್ಯಾಸಗಳಿಲ್ಲದೆ ಎರಡನ್ನೂ ಒಂದೇ ಸ್ವರ ಗುರುತುಗಳಲ್ಲಿ ಬಳಸಲಾಗುತ್ತದೆ. ಖರೋಷ್ಠಿ ಲಿಪಿಯು

ಒಟ್ಟು ಒಂಬತ್ತು ವಿರಾಮ ಚಿಹ್ನೆಗಳನ್ನು ಹೊಂದಿದ್ದು, ಇದು ರೋಮನ್ ಅಂಕಿಗಳನ್ನು ನೆನಪಿಸುವ ಸಂಖ್ಯಾಮೌಲ್ಯ ಚಿಹ್ನೆಗಳನ್ನು ಹೊಂದಿದೆ.

**ಲಿಪಿಗಳ ಮಹತ್ವ:**

'ಕ್ಷರ' ಎಂದರೆ ನಾಶ ಅಥವಾ ನಶಿಸು ಎಂದರ್ಥ. 'ಅಕ್ಷರ' ಎಂದರೆ ನಾಶವಾಗಲಾರದಂತದ್ದು ಅಥವಾ ನಶ್ವರವಲ್ಲದ್ದು ಎಂದರ್ಥ. ಈ ಅಕ್ಷರ ಪದವನ್ನು ನಾವು 'ಲಿಪಿ' ಎಂಬ ಇನ್ನೊಂದು ಅರ್ಥದಲ್ಲಿ ಕೂಡ ಬಳಸುತ್ತೇವೆ. ಲಿಪಿಗಳಲ್ಲಿ ಭಾಷೆ ಭಿನ್ನವಾಗಿರಬಹುದು ಆದರೆ ಭಾವಕ್ಕೆ ಅಂತರವಿರುವುದಿಲ್ಲ. ಭಾವಗಳ ಮೊತ್ತವನ್ನು ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಶೇಖರಿಸಿಡಲು ಇರುವಂತಹ ಆಕರವೇ 'ಲಿಪಿ'. ಜನಾಂಗಗಳು ಅಳಿದರೂ, ಯುಗಗಳು ಕಳೆದರೂ ನಾಶವಾಗದೆ ಉಳಿದು ನಿಲ್ಲುವಂತಹ ಶಕ್ತಿ 'ಲಿಪಿ'ಗಿದೆ. ಇದು ಗತ ಇತಿಹಾಸವನ್ನು ಪರಿಚಯಿಸುವುದರ ಜೊತೆಗೆ ಜ್ಞಾನ, ಸಮೃದ್ಧಿಯ ಪೂರಕವಾಗಿ ಮಾನವ ಜನಾಂಗದ ಇತಿಹಾಸದಲ್ಲಿ ಕೆಲಸ ಮಾಡುತ್ತಾ ಬಂದಿದೆ. ತಾಳೆಗರಿ, ಭೂರ್ಜಪತ್ರ, ತಾಮ್ರಪಟಗಳು, ಚರ್ಮಗಳು, ಶಿಲಾಶಾಸನಗಳು, ಸ್ತಂಭಶಾಸನಗಳು 'ಅಕ್ಷರವೆಂಬ' ಭದ್ರವಾದ ನೆಲೆಯಲ್ಲಿ ನಿಂತು ಇತಿಹಾಸ, ಸಂಸ್ಕೃತಿ, ಸಿದ್ಧಾಂತಗಳ ಪರಿಚಯವನ್ನು 'ಲಿಪಿ'ಯು ಮಾಡುತ್ತಾ ಬಂದಿದೆ.

ಪಾಣಿನಿಯು ತನ್ನ ಅಷ್ಟಾಧ್ಯಾಯಿಯಲ್ಲಿ ಮೊಟ್ಟ ಮೊದಲ ಬಾರಿಗೆ 'ಲಿಪಿ' ಎಂಬ ಪದ ಬಳಕೆ ಮಾಡಿದ್ದನೆಂದು ಕೆಲವು ಭಾಷಾತಜ್ಞರ ಅಭಿಮತ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಶಾಸನಗಳನ್ನು ಬರೆಸುವ ವಿಚಾರಕ್ಕೆ ಒಂದು ಭಾಗವೇ ಇದ್ದು, ಇದರಲ್ಲಿ ಲಿಪಿಗಳ ಬಳಕೆ, ಲೇಖಕನ ಅರ್ಹತೆ ಹಾಗೂ ಲೇಖನಗಳಲ್ಲಿನ ನ್ಯೂನತೆಗಳನ್ನು ಅದರ ಪರಿಹಾರ ಕುರಿತು ಕೆಲವೊಂದು ಮಹತ್ವದ ಅಂಶಗಳನ್ನು ನಾವು ಕಾಣುತ್ತೇವೆ. ರಾಜ ಮಹಾರಾಜರ ಕಾಲದಲ್ಲಿ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಂದೇಶ ರವಾನೆಯಾಗುತ್ತಿದ್ದದ್ದು ಲಿಪಿಗಳ ಅಥವಾ ಸಂಜ್ಞಾ ಚಿಹ್ನೆಗಳ ಮೂಲಕವೇ. ಗೂಢಾಚಾರರು ಕೆಲವೊಂದು ನಿರ್ದಿಷ್ಟ ಸಂಕೇತಗಳನ್ನು ಲಿಪಿಗಳ ರೂಪದಲ್ಲಿ ಬಳಸುತ್ತಿದ್ದರು. ವೇದಗಳಲ್ಲಿಯೂ ಸಹಿತ ಗಂಡು ಮಕ್ಕಳಿಗೆ ಚೌಲವಾದ (ಕೂದಲು ತೆಗೆಸಿದ) ನಂತರ ಲಿಪಿಗಳ ಪರಿಚಯದೊಂದಿಗೆ ಅಕ್ಷರಾಭ್ಯಾಸವನ್ನು ಮಾಡಿಸಬೇಕೆಂಬ ನಿರ್ದೇಶನವಿದೆ.

ಬೌದ್ಧರ ತ್ರಿಪಿಟಕಗಳಲ್ಲಿಯೂ ಕೂಡ ಲೇಖ ಮತ್ತು ಲೇಖಕ ಎಂಬ ಉಲ್ಲೇಖಗಳಿವೆ, 'ಭಿಕ್ಷುಪಾಚಿತ್ಯ' ಎಂಬ ಗ್ರಂಥದಲ್ಲಿ ಲೇಖನ (ಲಿಪಿ) ಜ್ಞಾನವು ಎಲ್ಲ ದೇಶಗಳಲ್ಲಿಯೂ ಗೌರವಿಸಲ್ಪಡುತ್ತದೆ ಎಂದು ಹೇಳಲಾಗಿದೆ. ದ್ರವ್ಯ ಸಂಪಾದನೆಗೆ ಅತಿ ಉತ್ತಮವಾದ ಮಾರ್ಗ ಲಿಪಿ ಪರಿಚಯ ಎಂದು ವಿನಯಪಿಟಕದಲ್ಲಿ ಉಲ್ಲೇಖಿತವಾಗಿದೆ. (ಪು.ಸಂ 10, ಕನ್ನಡ ಲಿಪಿಯ ಉಗಮ ಮತ್ತು ವಿಕಾಸ – ಡಾ. ಎ.ವಿ. ನರಸಿಂಹಮೂರ್ತಿ).

ಕ್ರಿ.ಪೂ ದಲ್ಲಿ ಬಾಳಿ ಬದುಕಿದ ಅಶೋಕನ ಧಮ್ಮ ಸಂದೇಶಗಳನ್ನು ಇಂದಿನ ನಮ್ಮ 21 ನೇ ಶತಮಾನದವರೆಗೂ ತಲುಪಿಸುವ, ಹಲವಾರು ರಾಜ ಮಹಾರಾಜರ ಆಡಳಿತ, ಕಾನೂನುಗಳ ಪರಿಚಯ ಶಾಸನಗಳ ಮೂಲಕ 'ಲಿಪಿ'ಯ ಮುಖಾಂತರವೇ ತಲುಪಿದ್ದು ಲಿಪಿಗಳ ಸಾಧನೆಗಳಲ್ಲೊಂದಾಗಿದೆ.

ಜ್ಞಾನವೆಂಬ ಪ್ರಭೆಯನ್ನು ಸರಸ್ವತಿಗೆ ಹೋಲಿಸಲಾಗಿದೆ, ಅಂತರಂಗದ ತಮವನ್ನು (ಕತ್ತಲೆಯನ್ನು) ಕಳೆಯಲು ಲಿಪಿಯು ಮಹತ್ವದ ಸ್ಥಾನವನ್ನು ಪಡೆದಿದೆ ಎನ್ನಬಹುದು.

ಇದು ಕೇವಲ 'ಲಿಪಿಯ' ಸಣ್ಣ ಹುಡುಕಾಟವಾಗಿದೆ, ಇದರ ವಿಕಾಸದ ಹಾದಿಯು ಇನ್ನೂ ಸುದೀರ್ಘವಾಗಿರುವುದು.

## ಪರಾಮರ್ಶನ ಗ್ರಂಥಗಳು:

1. ಶೆಟ್ಟರ ಷ., (2014), ಹಳಗನ್ನಡ ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ. ಅಭಿನವ ಪ್ರಕಾಶನ, ಬೆಂಗಳೂರು.
2. ಕನ್ನಡ ಶೈಲಿ ಕೈಪಿಡಿ, (2006), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಸದಾನಂದ ಕನವಳ್ಳಿ, ವೀರಣ್ಣ ರಾಜೂರು (ಸಂ), (1998), ಮಹಾಮಾರ್ಗ ಎಂ.ಎಂ. ಕಲಬುರ್ಗಿ ಅಭಿನಂದನಾ ಗ್ರಂಥ, ವೀರಶೈವ ಅಧ್ಯಯನ ಸಂಸ್ಥೆ, ಗದಗ.
4. ನರಸಿಂಹಮೂರ್ತಿ ಎ.ವಿ., (2006), ಕನ್ನಡ ಲಿಪಿಯ ಉಗಮ ವಿಕಾಸ, ಸುವರ್ಣ ಸಾಹಿತ್ಯ ಗ್ರಂಥ ಮಾಲೆ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.